# ಕರ್ನಾಟಕ ಲೋಕಾಯುಕ್ತ

ನಂ. ಉಪಲೋಕ್-1/ಡಿಇ-146 & 615/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 27.01.2021.

## ವಿಚಾರಣಾ ವರದಿ

**ಉಪಸ್ಥಿತರು: ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ-1) ಶ್ರೀ **ಬಿ.ಆರ್. ಗೌಡೂರ,** ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು, ಆ.ಸ.ನೌ-2 ಶ್ರೀ **ಮಲ್ಲಿಕಾರ್ಜುನ ಸಾಹು,** ಇಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು, ಆ.ಸ.ನೌ-3 ಶ್ರೀ **ಜಿ.ಎನ್. ಪ್ರಕಾಶ್,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ಉಪ ವಿಭಾಗ, ರಾಯಚೂರು, ಆ.ಸ.ನೌ-4 ಶ್ರೀ **ಶರಣೇಗೌಡ,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂಚು, ಆ.ಸ.ನೌ-5 **ಶ್ರೀ ಮೊಹಮ್ಮದ್ ಮೋಸಿನ್,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು, ಆ.ಸ.ನೌ-6 **ಶ್ರೀ ಬಾಬುರಾವ್,** ಕಿರಿಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು, ಆ.ಸ.ನೌ-7 **ಶ್ರೀ ರಾಮಚಂದ್ರ,** ಕ್ಷೇತ್ರ ಶಿಕ್ಷಣಾಧಿಕಾರಿ, ರಾಯಚೂರು ಮತ್ತು ಆ.ಸ.ನೌ-8 **ಶ್ರೀಮತಿ ಸುಜಾತ ಎಂ.** ಟ್ರೈನ್ಡ್ ಗ್ರಾಜ್ಯೂಯಟ್ ಟೀಚರ್, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಜಾಗೀರ್ ವೆಂಕಟಾಪುರ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/3609/2015/ಎಆರ್‌ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 09/12/2016.
2. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 170 ಇಎನ್‌ಕ್ಯೂ 16, ಬೆಂಗಳೂರು ದಿನಾಂಕ: 10/01/2017.
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 13 ಡಿಜಿಓ 2017, ಬೆಂಗಳೂರು ದಿನಾಂಕ: 13.03.2017.
4. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/146/2017, ಬೆಂಗಳೂರು ದಿನಾಂಕ: 31.01.2017.

5. ನಾಮನಿರ್ದೇಶನ ಸಂಖ್ಯೆ:ಉಪಲೋಕ್-1/ಡಿಇ/615/2017, ಬೆಂಗಳೂರು ದಿನಾಂಕ: 02-05-2017.

6. O.M. No.Uplok-1 & 2/DE/Transfers/ 2019, dated 07/02/2019.

* * * *

1) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಡಾವಳಿ ಸಂಖ್ಯೆ:ಗ್ರಾಅಪ 170 ಇಎನ್‌ಕ್ಯೂ 16, ಬೆಂಗಳೂರು ದಿನಾಂಕ 10-01-2017ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಗೌರವಾನ್ವಿತ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತ-1 ರವರ ನೇಮಕ ಆದೇಶ ಸಂಖ್ಯೆ:ಉಪಲೋಕ್-1/ಡಿ.ಇ/146/2017 ಬೆಂಗಳೂರು ದಿನಾಂಕ 31-01-2017 ರಂತೆ ಆಪಾದಿತ ಸರ್ಕಾರಿ ನೌಕರ-1 1) **ಶ್ರೀ ಬಿ.ಆರ್. ಗೌಡೂರ,** ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರಿನ ಯೋಜನೆ ಮತ್ತು ನೈರ್ಮಲ್ಯ ವಿಭಾಗ, ರಾಯಚೂರು 2) **ಶ್ರೀ ಮಲ್ಲಿಕಾರ್ಜುನ ಸಾಹು,** ಹಿಂದಿನ ಕಾರ್ಯನಿರ್ವಾಹಕ ಅಭಿಯಂತರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು (ದಿನಾಂಕ 31-12-2015ರಂದು ಸೇವೆಯಿಂದ ನಿವೃತ್ತಿ) 3) **ಶ್ರೀ ಜಿ.ಎನ್. ಪ್ರಕಾಶ್,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು 4) **ಶ್ರೀ ಶರಣೇಗೌಡ,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು 5) **ಶ್ರೀ ಮೊಹಮ್ಮದ್ ಮೋಸಿನ್,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಮತ್ತು 6) **ಶ್ರೀ ಬಾಬುರಾವ್,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ರವರುಗಳ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ-1 ರಿಂದ 6 ಎಂದು ಅನುಕ್ರಮವಾಗಿ ಸಂಬೋಧಿಸಲ್ಪಡುವ) ವಿರುದ್ಧ ದೋಷಾರೋಪಣೆ

ಸಿದ್ಧಪಡಿಸಿ ಜಾರಿ ಮಾಡಿ, ಇಲಾಖಾ ವಿಚಾರಣೆ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದ್ದು, ಅದರಂತೆ, ಅಪರ ನಿಬಂಧಕರು, ವಿಚಾರಣೆಗಳು–11 ನೀವು ಎಂದರೆ ಆಪಾದಿತ ಸರ್ಕಾರಿ **ನೌಕರರಾದ 1 ರಿಂದ 6 ರವರುಗಳ** ವಿರುದ್ಧ ಮಾಡಿರುವ **ದೋಷಾರೋಪಣೆಯು ಈ ಕೆಳಕಂಡಂತೆ** ಇರುತ್ತದೆ.

## ಅನುಬಂಧ–1
## ದೋಷಾರೋಪಣೆ

ನೀವು ಎಂದರೆ **ಒಂದನೆಯ** ಆಪಾದಿತ ಸರ್ಕಾರಿ ನೌಕರರು 2013–14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯು.ಪಿ ಯೋಜನೆಯಡಿಯಲ್ಲಿ ರಾಯಚೂರು ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿ ಇಲ್ಲದಿದ್ದ ಶಾಲೆಗಳಿಗೆ, ಕುಡಿಯುವ ನೀರು ಸರಬರಾಜು ಕಾಮಗಾರಿ ನಡೆಸಿ ಅನುದಾನ ದುರ್ಬಳಕೆ ಮಾಡಿದ್ದರ ಬಗ್ಗೆ ಮತ್ತು ಕಾಮಗಾರಿಗಳನ್ನು ಸರಿಯಾಗಿ ಮಾಡದೆ ಅವ್ಯವಹಾರ ನಡೆದಿದ್ದರೂ ಸಹ ಅದನ್ನು ತೋರ್ಪಡಿಸದೆ, ಆ ಕಾಮಗಾರಿಗಳು ತೃಪ್ತಿಕರವಾಗಿದೆ ಮತ್ತು ಅವುಗಳನ್ನು ನಿರ್ವಹಿಸಿದ ಅಧಿಕಾರಿಗಳಿಂದ ಯಾವುದೆ ಲೋಪ ದೋಷವಾಗಿಲ್ಲವೆಂದು ತಪ್ಪು ಮಾಹಿತಿಯನ್ನು ಸಲ್ಲಿಸಿ ಕರ್ತವ್ಯ ಲೋಪವನ್ನೆಸಗಿದ್ದು, ಸರ್ಕಾರಕ್ಕೆ ಅರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ನೀವು ಎಂದರೆ **ಎರಡನೆಯ** ಆಪಾದಿತ ಸರ್ಕಾರಿ ನೌಕರರು 2013–14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯೂಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ, ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿದ್ದು ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು, ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ನೀವು ಎಂದರೆ **ಮೂರನೆಯ** ಆಪಾದಿತ ಸರ್ಕಾರಿ ನೌಕರರು 2013–14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯೂಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ

ಯೋಜನೆಯನ್ನು ತಯಾರಿಸಿ, ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿದ್ದಲ್ಲದೆ ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು, ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ನೀವು ಎಂದರೆ **ನಾಲ್ಕನೆಯ** ಆಪಾದಿತ ಸರ್ಕಾರಿ ನೌಕರರು 2013-14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ, ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿದ್ದಲ್ಲದೆ ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು

ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ, ಸರ್ಕಾರಕ್ಕೆ ಅರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ನೀವು ಎಂದರೆ **ಐದು** ಮತ್ತು **ಆರನೆ** ಆಪಾದಿತ ಸರ್ಕಾರಿ ನೌಕರರು 2013-14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯು.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿದ್ದಲ್ಲದೆ, ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು ಸರ್ಕಾರದ

ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಅರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

**ಅನುಬಂಧ-2**
**ದೋಷರೋಪಣೆಯ ವಿವರ**

ದೂರುದಾರರಾದ **ಶ್ರೀ ಬಸವರಾಜ್ ಗಾರಲದಿನ್ನಿ** ಬಿನ್ ಮಲ್ಲಯ್ಯ, ಗಾರಲದಿನ್ನಿ ಗ್ರಾಮ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆರವರು ಈ ಸಂಸ್ಥೆಯಲ್ಲಿ ನಿಮ್ಮ ವಿರುದ್ಧ ದೂರನ್ನು ಸಲ್ಲಿಸಿ ಸದರಿ ದೂರಿನಲ್ಲಿ 2013-14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ರಾಯಚೂರು ತಾಲ್ಲೂಕಿನ ಅರಳಿಬೆಂಚಿ, ಜಾಲಿಬೆಂಚಿ, ಮೂಡಲದಿನ್ನಿ, ಪತ್ತೆಪುರ, ಜಾಗೀರವೆಂಕಟಾಪುರ ಮತ್ತು ಅರಳಪ್ಪನಹುಡ ಗ್ರಾಮಗಳಲ್ಲಿರುವ ಸರ್ಕಾರಿ ಉರ್ದು ಶಾಲೆಗಳು ಇಲ್ಲದೆ ಇದ್ದರೂ ಸಹ ಮೇಲ್ಕಾಣಿಸಿದ ಯೋಜನೆಯಡಿಯಲ್ಲಿ ಮೇಲ್ಕಾಣಿಸಿದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳನ್ನು ನಿರ್ವಹಿಸಿ ಲಕ್ಷಾಂತರ ರೂಪಾಯಿಗಳ ಆರ್ಥಿಕ ನಷ್ಟವನ್ನು ಸರ್ಕಾರಕ್ಕೆ ಮಾಡಿರುವುದಾಗಿ ಆಪಾದಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರಿಗೆ ದೂರು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

ಸದರಿ ಆಪಾದನೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾ ಲೋಕಾಯುಕ್ತ ಕಛೇರಿಯ ಪೊಲೀಸ್ ಅಧೀಕ್ಷಕರಿಗೆ ಸದರಿ ದೂರಿಗೆ ಸಂಬಂಧಿಸಿದಂತೆ ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ಸೂಚಿಸಿದ್ದು ಅದರಂತೆ, ತನಿಖಾಧಿಕಾರಿಯವರು ತನಿಖೆ ಮಾಡಿದ ತನಿಖಾ ವರದಿಯನ್ನು ಸಲ್ಲಿಸಿದ್ದು, ಸದರಿ ತನಿಖಾ ವರದಿಯಿಂದ ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

1) ನೀವು ಎಂದರೆ ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಿ.ಆರ್. ಗೌಡೂರ, ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರಿನ ಯೋಜನೆ ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಆದ ನೀವು 2013-14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಕಾಮಗಾರಿ ಮಾಡಿ ಅನುದಾನ ದುರ್ಬಳಕೆ, ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸದೇ ಇದ್ದರೂ ತೃಪ್ತಿಕರವಾಗಿ ನಿರ್ವಹಿಸಲಾಗಿದೆ ಎಂದು ಸುಳ್ಳು ಮಾಹಿತಿಯನ್ನು ನೀಡಿರುತ್ತೀರಿ.

2) ನೀವು ಎಂದರೆ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಲ್ಲಿಕಾರ್ಜುನ ಸಾಹು, ಹಿಂದಿನ ಕಾರ್ಯನಿರ್ವಾಹಕ ಅಭಿಯಂತರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು (ದಿನಾಂಕ 31-12-2015ರಂದು ಸೇವೆಯಿಂದ ನಿವೃತ್ತಿ) 2013-14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿದ್ದು ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ ಕಾಮಗಾರಿ ಮಾಡಿದೆ

ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

3) ನೀವು ಎಂದರೆ ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಜಿ.ಎನ್. ಪ್ರಕಾಶ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು, ಆದ ನೀವು 2013-14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದು, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ.

4) ನೀವು ಎಂದರೆ ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಶರಣೇಗೌಡ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಆದ ನೀವು 2013-14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದು, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ.

5) ನೀವು ಎಂದರೆ ನಾಲ್ಕನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮೊಹಮ್ಮದ್ ಮೋಸಿನ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಆದ ನೀವು ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದು, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ.

6) ನೀವು ಎಂದರೆ ಶ್ರೀ ಬಾಬುರಾವ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ಆದ ನೀವು ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದ, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ.

ದೂರು, ತನಿಖಾ ವರದಿ ಮತ್ತು ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮಗಳನ್ನು ಕೈಗೊಳ್ಳದೆ ಇರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಸದರಿ ದೂರಿಗೆ ಸಂಬಂಧಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ಆಪಾದಿತ ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1) (i) (ii) ಮತ್ತು (iii) ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ ಎದುರುದಾರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು

ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿದ್ದು **ಗೌರವಾನ್ವಿತ ಉಪಲೋಕಾಯುಕ್ತ-1 ರವರು ಅಪರ ನಿಬಂಧಕರು, ವಿಚಾರಣೆಗಳು-11 ರವರಿಗೆ 1 ರಿಂದ 6 ಆಪಾದಿತ ಸರ್ಕಾರಿ ನೌಕರರ ವಿರುದ್ಧ ದೋಷಾರೋಪಣೆ ತಯಾರಿಸಿ ವಿಚಾರಣೆಕೈಗೊಂಡು ವರದಿ ಸಲ್ಲಿಸುವಂತೆ ನಾಮನಿರ್ಧೇಶನ ಮಾಡಿರುತ್ತಾರೆ.**

**ನಂ. ಉಪಲೋಕ್-1/ಡಿಇ/615/3027/ಎಆರ್ಇ-16**

**ಅನುಬಂಧ-1**

**ದೋಷಾರೋಪಣೆ**

**2)** ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಆಡಳಿತ) ರವರ ಸಂಖ್ಯೆ ಇಡಿ 13 ಡಿಜಿಒ 2017 ಬೆಂಗಳೂರು ದಿನಾಂಕ 13-03-2017 ರ ಪ್ರಕಾರ 1) ಶ್ರೀ **ರಾಮಚಂದ್ರ,** ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು 2) ಶ್ರೀಮತಿ **ಎಂ. ಸುಜಾತ,** ತರಬೇತಿ ಪದವೀದರ ಶಿಕ್ಷಕಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಾಗೀರ್ ವೆಂಕಟಾಪುರ ತಾಲ್ಲೂಕು, ರಾಯಚೂರು ಜಿಲ್ಲೆ **(ಇನ್ನು ಮುಂದೆ ಕ್ರಮವಾಗಿ ಆಪಾದಿತ ಸರ್ಕಾರಿ ನೌಕರ-7 ಮತ್ತು 8 ಎಂದು ಕರೆಯಲ್ಪಡುತ್ತಾರೆ)** ರವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಗೌರವಾನ್ವಿತ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತ-1 ರವರ ನೇಮಕ ಆದೇಶ ಸಂಖ್ಯೆ ಉಪಲೋಕ್-1/ಡಿಇ/615/2017 ಬೆಂಗಳೂರು ದಿನಾಂಕ 02.05.2017 ರಂತೆ ಸದರಿಯವರುಗಳ ವಿರುದ್ಧ ದೋಷಾರೋಪಣೆ ಸಿದ್ದಪಡಿಸಿ ಇಲಾಖಾ ವಿಚಾರಣೆ ಕೈಗೊಳ್ಳಲು ಅಪರ ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿದ್ದು, ಅದರಂತೆ ಅಪರ

ನಿಬಂಧಕರು, ವಿಚಾರಣೆಗಳು-11, ರವರು ಆಪಾದಿತ ಸರ್ಕಾರಿ ನೌಕರ-7 ಮತ್ತು 8 ರವರುಗಳ **ವಿರುದ್ಧ ಮಾಡಿರುವ ದೋಷಾರೋಪಣೆಯು ಈ ಕೆಳಕಂಡಂತೆ ಇರುತ್ತದೆ.**

ಇಲಾಖಾ ವಿಚಾರಣೆ ಸಂಖ್ಯೆ: ಉಪಲೋಕ್-1/ಡಿ.ಇ/146/2017/ಎ.ಆರ್.ಇ.11 ಕಡತದಲ್ಲಿ ಕಾಣಿಸಲಾಗಿರುವ ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಿ.ಆರ್. ಗೌಡೂರು ರವರು 2013-14ನೆಯ ಸಾಲಿನ ಎನ್. ಆರ್. ಡಿ. ಡಬ್ಲೂ.ಪಿ ಯೋಜನೆಯಡಿಯಲ್ಲಿ ರಾಯಚೂರು ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿ ಇಲ್ಲದಿದ್ದ ಶಾಲೆಗಳಿಗೆ ಕುಡಿಯುವ ನೀರು ಸರಬರಾಜು ಕಾಮಗಾರಿ ನಡೆಸಿ ಅನುದಾನ ದುರ್ಬಳಕೆ ಮಾಡಿದ್ದರ ಬಗ್ಗೆ ಮತ್ತು ಕಾಮಗಾರಿಗಳನ್ನು ಸರಿಯಾಗಿ ಮಾಡದೆ ಅವ್ಯವಹಾರ ನಡೆದಿದ್ದರೂ ಸಹ, ಅದನ್ನು ತೋರ್ಪಡಿಸದೆ, ಆ ಕಾಮಗಾರಿಗಳು ತೃಪ್ತಿಕರವಾಗಿದೆ ಮತ್ತು ಅವುಗಳನ್ನು ನಿರ್ವಹಿಸಿದ ಅಧಿಕಾರಿಗಳಿಂದ ಯಾವುದೆ ಲೋಪ ನಷ್ಟವನ್ನುಂಟು ಮಾಡಿಲ್ಲವೆಂದು ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗಿಕ ಸೇವಾ ನಿಯಮಗಳು (ನಡೆತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆಂಬುದಾಗಿ ಮತ್ತು ಸದರಿ ಕಡತದಲ್ಲಿ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶೀ ಮಲ್ಲಿಕಾರ್ಜುನ ಸಾಹು ರವರು 2013-14ನೆಯ ಸಾಲಿನ ಎನ್. ಆರ್. ಡಿ. ಡಬ್ಲೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ, ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿರುವುದು ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್

ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು ಹಾಗೂ ಕಾಮಗಾರಿಗಳ ಅಂದಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಲೋಪವನ್ನಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ, ಸರ್ಕಾರಿ ನೌಕರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆಂಬುದಾಗಿಯೂ, ಸದರಿ ಕಡತದಲ್ಲಿರುವ ಮೂರನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಜಿ.ಎನ್. ಪ್ರಕಾಶ್‌ರವರು 2013-14ನೆಯ ಸಾಲಿನ ಎಸ್. ಆರ್. ಡಿ.ಡಬ್ಲ್ಯೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ ನಿರ್ಲಕ್ಷದಿಂದ ಕರ್ತವ್ಯಲೋಪವನ್ನೆಸಗಿದ್ದಲ್ಲದೆ, ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು, ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ

ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟುಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆಂಬುದಾಗಿಯೂ, ಸದರಿ ಪ್ರಕರಣದಲ್ಲಿ ನಾಲ್ಕನೆಯ ಆಪಾದಿತ ಸರ್ಕಾರಿ ನೌಕರಾದ ಶ್ರೀ ಶರಣೇಗೌಡ ರವರು 2013–14ನೇಯ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ ನಿರ್ಲಕ್ಷದಿಂದ ಕರ್ತವ್ಯಲೋಪವನ್ನೆಸಗಿದ್ದಲ್ಲದೆ ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ, ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು, ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ

ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆಂಬುದಾಗಿಯೂ, ಸದರಿ ಪ್ರಕರಣದಲ್ಲಿ ಐದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮೊಹಮ್ಮದ್ ಮೌಸಿನ್ ರವರು 2013–14ನೆಯ ಸಾಲಿನ ಎನ್. ಆರ್. ಡಿ.ಡಬ್ಲ್ಯೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ ನಿರ್ಲಕ್ಷದಿಂದ ಕರ್ತವ್ಯಲೋಪವನೆಸಗಿದ್ದಲ್ಲದೆ ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು, ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸಕಾರಕ್ಕೆ ಅರ್ಥಿಕ ನಷ್ಟವನ್ನುಂಟು ಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆಂಬುದಾಗಿಯೂ, ಸದರಿ ಪ್ರಕರಣದಲ್ಲಿ ಆರನೆಯ

ಆಪಾದಿತ ಸರ್ಕಾರಿ ನೌಕರರು ನೌಕರರಾದ ಶ್ರೀ ಬಾಬುರಾವ್‌ರವರು 2013–14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ, ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿದ್ದಲ್ಲದೆ ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಆ ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು, ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ, ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ ಅಳವಡಿಸುವ ಹಣವನ್ನು ಪಡೆದುಕೊಂಡು, ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ, ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆಂಬುದಾಗಿಯೂ ಆಪಾದಿಸಲಾಗಿದ್ದು, ನೀವು ಎಂದರೆ ಉಪಲೋಕ್–1/ಡಿ.ಇ/146/2017 ಕಡತದಲ್ಲಿನ ಒಂದನೆಯ ಆಪಾದಿತ ಸರ್ಕಾರಿ ನೌಕರರಾದ (ಶ್ರೀ ರಾಮಚಂದ್ರ) 2013–14ನೆಯ ಸಾಲಿನ ಎನ್. ಆರ್. ಡಿ.ಡಬ್ಲ್ಯೂ.ಡಿ. ಯೋಜನೆಯಲ್ಲಿ ರಾಯಚೂರು ತಾಲ್ಲೂಕಿನಲ್ಲಿ ಇಲ್ಲದ ಶಾಲೆಗಳಿಗೆ ಕುಡಿಯುವ ನೀರಿನ ಸರಬರಾಜು ಕಾಮಗಾರಿಯಲ್ಲಿ

ಅನುದಾನದ ದುರ್ಬಳಕೆ ಮಾಡಿದ್ದರ ಬಗ್ಗೆ ಆಪಾದನೆಗಳನ್ನು ತನಿಖೆ ಮಾಡಿ ವರದಿ ಸಲ್ಲಿಸುವಂತೆ ರಾಯಚೂರಿನ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಆದೇಶ ಮಾಡಿದ್ದು, ನೀವು ಸಂಬಂಧಪಟ್ಟ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸದೆ ವಿವರವಾದ ತನಿಖಾ ವರದಿಯನ್ನು ನೀಡದೆ ಬೇಜವಾಬ್ದಾರಿ ಉತ್ತರವನ್ನು ನೀಡಿ, ಆ ಮೂಲಕ ನೀವು ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ ಮತ್ತು ನೀವು ಎಂದರೆ ಉಪಲೋಕ್-1/ಡಿಇ/146/2017/ಎಆರ್‌ಇ11 ಡತದಲ್ಲಿನ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ **ಸುಜಾತ ಎಂ** ರವರು ಜಾಗೀರ್ ವೆಂಕಟಾಪುರ ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಗುರುಗಳಾಗಿದ್ದ ಅವದಿಯಲ್ಲಿ 2013-14ನೇ ಸಾಲಿನಲ್ಲಿ ಎನ್.ಆರ್.ಇ.ಡಿ.ಡಬ್ಲ್ಯೂ.ಡಿ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದೆ ಇದ್ದರೂ ಸಹ ಆ ಕಾಮಗಾರಿಯನ್ನು ಹಸ್ತಾಂತರಿಸಿಕೊಂಡ ಪತ್ರಕ್ಕೆ ಸಹಿ ಮಾಡಿ ಕರ್ತವ್ಯ ಲೋಪವನ್ನೆಸಗಿ ಆ ಮೂಲಕ ನೀವು ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ನಡತೆ) 1966 ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

ದೂರುದಾರರಾದ ಶ್ರೀ ಬಸವರಾಜ್ ಗಾರಲದಿನ್ನಿ ಬಿನ್ ಮಲ್ಲಯ್ಯ, ಗಾರಲದಿನ್ನಿ ಗ್ರಾಮ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆರವರು ಈ ಸಂಸ್ಥೆಯಲ್ಲಿ ನಿಮ್ಮ ವಿರುದ್ಧ ದೂರನ್ನು

ಸಲ್ಲಿಸಿ ಸದರಿ ದೂರಿನಲ್ಲಿ 2013–14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ರಾಯಚೂರು ತಾಲ್ಲೂಕಿನ ಅರಳಿಬೆಂಚಿ, ಜಾಲಿಬೆಂಚಿ, ಮೂಡಲದಿನ್ನಿ, ಪತ್ತೆಪುರ, ಜಾಗೀರವೆಂಕಟಾಪುರ ಮತ್ತು ಅರಳಪ್ಪನಹುಡ ಗ್ರಾಮಗಳಲ್ಲಿರುವ ಸರ್ಕಾರಿ ಉರ್ದು ಶಾಲೆಗಳು ಇಲ್ಲದೆ ಇದ್ದರೂ ಸಹ, ಮೇಲ್ಕಾಣಿಸಿದ ಯೋಜನೆಯಡಿಯಲ್ಲಿ ಮೇಲ್ಕಾಣಿಸಿದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳನ್ನು ನಿರ್ವಹಿಸಿ, ಲಕ್ಷಾಂತರ ರೂಪಾಯಿಗಳ ಆರ್ಥಿಕ ನಷ್ಟವನ್ನು ಸರ್ಕಾರಕ್ಕೆ ಮಾಡಿರುವುದಾಗಿ ಆಪಾದಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರಿಗೆ ದೂರು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

ಸದರಿ ಆಪಾದನೆಗೆ ಸಂಬಂಧಿಸಿದಂತೆ, ರಾಯಚೂರು ಜಿಲ್ಲಾ ಲೋಕಾಯುಕ್ತ ಕಛೇರಿಯ ಪೊಲೀಸ್ ಅಧೀಕ್ಷಕರಿಗೆ ಸದರಿ ದೂರಿಗೆ ಸಂಬಂಧಿಸಿದಂತೆ ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ಸೂಚಿಸಿದ್ದು ಅದರಂತೆ, ತನಿಖಾಧಿಕಾರಿಯವರು ತನಿಖೆ ಮಾಡಿದ ತನಿಖಾ ವರದಿಯನ್ನು ಸಲ್ಲಿಸಿದ್ದು, ಸದರಿ ತನಿಖಾ ವರದಿಯಿಂದ ಈ ಕೆಳಕಂಡ ಅಂಶಗಳು ಕಂಡುಬರುತ್ತದೆ.

1. ಶ್ರೀ ಬಿ.ಆರ್. ಗೌಡೂರ. ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರಿನ ಯೋಜನೆ ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಆದ ನೀವು 2013–14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ, ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಕಾಮಗಾರಿ ಮಾಡಿ ಅನುದಾನ ದುರ್ಬಳಕೆ, ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸದೇ ಇದ್ದರೂ ತೃಪ್ತಿಕರವಾಗಿ ನಿರ್ವಹಿಸಲಾಗಿದೆ. ಎಂದು ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ.

2. ಶ್ರೀ ಮಲ್ಲಿಕಾರ್ಜುನ ಸಾಹು, ಹಿಂದಿನ ಕಾರ್ಯನಿರ್ವಾಹಕ ಅಭಿಯಂತರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ( ದಿನಾಂಕ: 31-12-2015 ರಂದು ಸೇವೆಯಿಂದ ನಿವೃತ್ತಿ) 2013-14ನೆಯ ಸಾಲಿನ ಎನ್. ಆರ್. ಡಿ.ಡಬ್ಲ್ಯೂ.ಪಿ ಯೋಜನೆಯ ಕ್ರಿಯಾಯೋಜನೆಯನ್ನು ಗ್ರಾಮಗಳಲ್ಲಿ ಇಲ್ಲದಿರುವ ಉರ್ದು ಶಾಲೆಗಳಲ್ಲಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಗಳಿರುವ ಕ್ರಿಯಾ ಯೋಜನೆಯನ್ನು ತಯಾರಿಸಿ ನಿರ್ಲಕ್ಷ್ಯದಿಂದ ಕರ್ತವ್ಯಲೋಪವನ್ನೆಸಗಿದ್ದು ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ, ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಹಣವನ್ನು ಪಡೆದುಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟುಮಾಡಿರುತ್ತಾರೆ.

3. ಶ್ರೀ ಜಿ. ಎನ್. ಪ್ರಕಾಶ್. ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ರವರು 2013-14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ, ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ, ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದು, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್ನನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ,

ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತ ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

4. ಶ್ರೀ ಶರಣೇಗೌಡ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ರವರು 2013-14ನೆಯ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದು, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

5. ಶ್ರೀ ಮೊಹಮ್ಮದ್ ಮೋಸಿನ್, ಕಿರಿಯ ಇಂಜಿನಿಯರ್, ಪಂಚಾಯತ್, ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ರವರು ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದು, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

6. ಶ್ರೀ ಬಾಬುರಾವ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು ರವರು ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನ್ಯತೆಯಿಂದ ಕೂಡಿರುವ ಕ್ರಿಯಾ ಯೋಜನೆಯನ್ನು ತಯಾರಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುದು, ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೆ, ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

7. ರಾಯಚೂರಿನ ಕ್ಷೇತ್ರ ಶಿಕ್ಷಣಾಧಿಕಾರಿಯಾದ **ರಾಮಚಂದ್ರ ರವರು** 2013–14 ನೇಯ ಸಾಲಿನ ಎನ್. ಆರ್. ಡಿ.ಡಬ್ಲ್ಯೂ.ಪಿ ಯೋಜನೆಯಲ್ಲಿ ರಾಯಚೂರು ತಾಲ್ಲೂಕಿನ ಇಲ್ಲದ ಶಾಲೆಗಳಿಗೆ ಕುಡಿಯುವ ನೀರು ಸರಬರಾಜು ಕಾಮಗಾರಿಯಲ್ಲಿ ಅನುದಾನದ ದುರ್ಬಳಕೆ ಮಾಡಿದ್ದರ ಬಗ್ಗೆ ಆಪಾದನೆಗಳನ್ನು ತನಿಖೆ ಮಾಡಿ ವರದಿ ಸಲ್ಲಿಸುವಂತೆ ರಾಯಚೂರಿನ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಆದೇಶ ಮಾಡಿದ್ದು, ರಾಮಚಂದ್ರ ರವರು ಸಂಬಂದಪಟ್ಟ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸದೆ ವಿವರವಾದ ತನಿಖಾ ವರದಿಯನ್ನು ನೀಡದೆ ಬೇಜವಾಬ್ದಾರಿ ಉತ್ತರವನ್ನು ನೀಡಿ ಕರ್ತವ್ಯ ಲೋಪವನ್ನೆಸಗಿರುತ್ತಾರೆ.

8. ಶ್ರೀಮತಿ **ಸುಜಾತ ಎಂ** ರವರು ರಾಯಚೂರು ಜಿಲ್ಲೆಯ ಜಾಗೀರ್ ವೆಂಕಟಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಭಾರಿ ಮುಖ್ಯ ಗುರುವಾಗಿದ್ದ ಅವದಿಯಲ್ಲಿ, 2013–14ನೆಯ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದೆ ಇದ್ದರೂ ಸಹ, ಆ ಕಾಮಗಾರಿಯನ್ನು ಹಸ್ತಾಂತರಿಸಿಕೊಂಡ ಪತ್ರಕ್ಕೆ ಸಹಿ ಮಾಡಿ ಲೋಪವನ್ನೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ದೂರು, ತನಿಖಾ ವರದಿ ಮತ್ತು ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರಾದ ಶ್ರೀ ರಾಮಚಂದ್ರ ಮತ್ತು ಶ್ರೀಮತಿ ಸುಜಾತ ಎಂ. ರವರುಗಳು ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ)1966ರಡಿ ನಿಯಮ 3(1) (ii) ಮತ್ತು (iii) ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ ಶ್ರೀ ಬಿ.ಆರ್. ಗೌಡೂರು, ಶ್ರೀ ಜಿ.ಎನ್. ಪ್ರಕಾಶ್, ಶ್ರೀ ಶರಣೇಗೌಡ , ಶ್ರೀ ಮೊಹಮ್ಮದ್ ಮೋಸಿನ್, ಶ್ರೀ ಬಾಬುರಾವ್, ಶ್ರೀ ರಾಮಚಂದ್ರ ಮತ್ತು ಶ್ರೀಮತಿ ಸುಜಾತ ಎಂ. ರವರ ವಿರುದ್ದ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೊಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ದ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ದ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. **ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.**

@@@@

3) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ.–1 ರಿಂದ 6 17.02.2017 ಕ್ಕೆ ಮತ್ತು ಆ.ಸ.ನೌ–7 ಮತ್ತು 8 ರವರುಗಳಿಗೆ ದಿನಾಂಕ 23.08.2017 ರಂದು ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ.–1 ರಿಂದ 6 ರವರುಗಳು ದಿನಾಂಕ 08.03.2017 ರಂದು ಮತ್ತು ಆ.ಸ.ನೌ–7 ಮತ್ತು 8 ರವರುಗಳು ದಿನಾಂಕ 25.09.2017 ರಂದು ವಿಚಾರಣಾಧಿಕಾರಿಯವರ ಮುಂದೆ ಹಾಜರಾಗಿದ್ದು, ಸದರಿಯವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ

ದಾಖಲಿಸಲಾಗಿರುತ್ತದೆ. ಆ.ಸ.ನೌ.–1 ರಿಂದ 8 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) ಉಪಲೋಕ–1/ಡಿಇ/146/2017/ಎಆರ್‌ಇ–11 ರ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಆ.ಸ.ನೌ–1 ರಿಂದ 6 ಮತ್ತು ಉಪಲೋಕ್–/ಡಿಇ/615/2017/ಎಆರ್‌ಇ–11 ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಆ.ಸ.ನೌ–7 ಮತ್ತು 8 ರವರುಗಳ ವಿರುದ್ಧ ಒಂದೇ ವರದಿಯನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ಅಡಿಯಲ್ಲಿ ಈ ಲೋಕಾಯುಕ್ತ ಸಂಸ್ಥೆಯಿಂದ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದ್ದು, ಸಕ್ಷಮ ಪ್ರಾಧಿಕಾರವು ಉಲ್ಲೇಖ–2 ಮತ್ತು 3 ರಂತೆ ಎರಡು ಸರ್ಕಾರಿ ಆದೇಶ ಬೇರೆ ಬೇರೆ ದಿನಾಂಕಗಳಂದು ಹೊರಡಿಸಿದ್ದು, ಕಾರಣ ಗೌರವಾನ್ವಿತ ಉಪಲೋಕಾಯುಕ್ತ–1 ರವರು ಈ ಎರಡೂ ಪ್ರಕರಣಗಳಿಗೆ ಬೇರೆ ಬೇರೆ ದಿನಾಂಕಗಳಂದು ಬೇರೆ ಬೇರೆ ನಾಮನಿರ್ದೇಶನ ನೀಡಿ ವಿಚಾರಣೆಗೊಳಪಡಿಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ವಿಚಾರಣೆಯ ಮಧ್ಯಂತರ ಅವಧಿಯಲ್ಲಿ ಈ ಎರಡೂ ಪ್ರಕರಣಗಳು ಒಂದೇ ವಸ್ತು ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ, ಈ ಎರಡೂ ಪ್ರಕರಣಗಳನ್ನು ಜಂಟಿಯಾಗಿ ವಿಚಾರಣೆ ಮಾಡಲು ಅಪರ ನಿಬಂಧಕರು, ವಿಚಾರಣೆಗಳು–11 ರವರು ದಿನಾಂಕ 22.08.2017 ರಂದು ನಿರ್ಣಯಿಸಿ, ಆ ಪ್ರಕಾರ ಜಂಟಿಯಾಗಿ ವಿಚಾರಣೆ ಮುಂದೂವರಿಸಲಾಗಿರುತ್ತದೆ.

5) ಆ.ಸ.ನೌ.–1 ರಿಂದ 8 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.–1 ರಿಂದ 6 ರವರುಗಳು ತಮ್ಮ ಪರವಾಗಿ ದಿನಾಂಕ 03/06/2017 ರಂದು ಮತ್ತು ಆ.ಸ.ನೌ–7 ಮತ್ತು 8 ರವರುಗಳು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ, ಸದರಿ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ದೋಷಾರೋಪಣೆಯಲ್ಲಿ ಆಪಾದಿಸಿರುವ ಆರೋಪಗಳು ಸತ್ಯಕ್ಕೆ ದೂರವಾಗಿದ್ದು ತಾವುಗಳು

ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲವೆಂದು, ತಾವು ಸರ್ಕಾರಿ ಕೆಲಸವನ್ನು ಪ್ರಾಮಾಣಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸಿದ್ದು, ದುರ್ನಡತೆಯಿಂದ ನಡೆದುಕೊಂಡಿರುವುದಿಲ್ಲವೆಂದು, ಆದ್ದರಿಂದ, ತಮ್ಮನ್ನು ಈ ಆರೋಪದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

7) ಈ ವಿಚಾರಣೆಯಲ್ಲಿ, ಆ.ಸ.ನೌ.–1 ರಿಂದ 8 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ ಬಸವರಾಜ ಗಾರಲದಿನ್ನಿ ರವರನ್ನು ಪಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 4 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯಾದ ಶ್ರೀ ವೀರಪ್ಪ ಕುಂಬಾರ, ನಿವೃತ್ತ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 5 ರಿಂದ 12 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ.–1 ರಿಂದ 8 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ತಗೆದುಕೊಳ್ಳಲಾಗಿರುತ್ತದೆ.

8) ಆ.ಸ.ನೌ.–1 ರಿಂದ 6 ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯೂ–1 ರಿಂದ 6 ಎಂದು ಸಾಕ್ಷ್ಯ ನುಡಿದಿದ್ದು, **ನಿ.ಡಿ.–1** ರಿಂದ 6 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

9) ವಿಚಾರಣೆಯ ಮಧ್ಯಂತರದಲ್ಲಿ ಆ.ಸ.ನೌ–7 ಮತ್ತು 8 ರವರು ಗೈರುಹಾಜರಾಗಿದ್ದರಿಂದ **ಏಕತರ್ಪಿಯೆಂದು ನಿರ್ಣಯಿಸಲಾಗಿರುತ್ತದೆ.**

10) ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ.–1 ರಿಂದ 6 ರವರುಗಳ ಪರ ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

11) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ಶಿಸ್ತು ಪ್ರಾಧಿಕಾರವು ಆ.ಸ.ನೌ–1 ರಿಂದ 8 ರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

12) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

14) ಈ ಪ್ರಕರಣದಲ್ಲಿ ಆ.ಸ.ನೌ.–1 ರಿಂದ 8 ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು, ದೂರುದಾರರಾದ

ಶ್ರೀ ಬಸವರಾಜ ಗಾರಲದಿನ್ನಿ ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 1 ರಿಂದ 4 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ನಿ.ಪಿ–1 ದೂರುದಾರರು ದಿ: 09.06.2015 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಿದ ದೂರು ಅರ್ಜಿಯಾಗಿದ್ದು, ನಿ.ಪಿ–2 ದಿನಾಂಕ 26.03.2015 ರಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ನೀಡಿದ ದೂರು ಅರ್ಜಿಯಾಗಿರುತ್ತದೆ. ನಿ.ಪಿ–3 ನಮೂನೆ–1 ದೂರಾಗಿದ್ದು, ನಿ.ಪಿ–4 ನಮೂನೆ–2 ರ ದೂರಿನ ಪ್ರತಿಯಾಗಿರುತ್ತದೆ.

15) ಶಿಸ್ತು ಪ್ರಾಧಿಕಾರವು ಮುಂದುವರೆದು ಶ್ರೀ ವೀರಪ್ಪ ಕುಂಬಾರ, ನಿವೃತ್ತ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 5 ರಿಂದ 12 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–5 ತನಿಖಾಧಿಕಾರಿಯು ತನಿಖಾ ಕಾಲಕ್ಕೆ ಪಡೆಯಲಾದ ದೂರುದಾರರಾದ ಶ್ರೀ ಬಸವರಾಜ್ ಮಲ್ಲಯ್ಯನವರ ಹೇಳಿಕೆಯಾಗಿದ್ದು, ನಿ.ಪಿ–6 ತನಿಖಾಧಿಕಾರಿ/ಪಿಡಬ್ಲ್ಯೂ–2 ರವರು ದಿನಾಂಕ 29.02.2016 ರಂದು ರಾಯಚೂರು ಕಾರ್ಯನಿರ್ವಾಹಕ ಅಭಿಯಂತರರಿಗೆ ನೀಡಿದ ನೋಟಿಸ್ ಇರುತ್ತದೆ. ನಿ.ಪಿ–7 ಸದರಿ ನೋಟಿಸ್‌ಗೆ ಕಾರ್ಯಪಾಲಕ ಅಭಿಯಂತರರು ದಿನಾಂಕ 17.03.2016 ರಂದು ದಾಖಲೆ ಮತ್ತು ಫೋಟೋಗಳೊಂದಿಗೆ ನೀಡಿದ ಉತ್ತರವಾಗಿರುತ್ತದೆ. ನಿ.ಪಿ–8 ದಾಖಲೆಯು ಈ ವಿವಾದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದಿನಾಂಕ 28.03.2016 ರಂದು ಪುನಹ ಕಾರ್ಯಪಾಲಕ ಅಭಿಯಂತರರು ಸಲ್ಲಿಸಿದ ದಾಖಲೆಗಳಾಗಿರುತ್ತದೆ. ನಿ.ಪಿ–9 ತನಿಖಾಧಿಕಾರಿಯು ದಿನಾಂಕ 30.03.2016 ರಂದು ಪುನಹ ಮಾಹಿತಿ ಕೇಳಿ ಕಾರ್ಯಪಾಲಕ ಅಭಿಯಂತರರಿಗೆ ಬರೆದ

ಪತ್ರವಾಗಿರುತ್ತದೆ. ನಿ.ಪಿ–10 ತನಿಖಾಧಿಕಾರಿಯು ದಿನಾಂಕ 30.03.2016 ರಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರಿಗೆ ಮಾಹಿತಿ ಕೇಳಿ ಬರೆದ ಪತ್ರವಾಗಿರುತ್ತದೆ. ನಿ.ಪಿ–11 ತನಿಖಾ ವರದಿಯಾಗಿದ್ದು (22 ಹಾಳೆಗಳು), ನಿ.ಪಿ–12 ತನಿಖಾ ಸಮಯದಲ್ಲಿ ತನಿಖಾಧಿಕಾರಿ ತೆಗೆದ ಪೋಟೋಗಳಾಗಿರುತ್ತದೆ.

16) ಆ.ಸ.ನೌ.–1 ರಿಂದ 6 ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯೂ–1 ರಿಂದ 6 ಎಂದು ಸಾಕ್ಷ್ಯ ನುಡಿದಿದ್ದು, ನಿ.ಡಿ.–1 ರಿಂದ 6 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಡಿ.–1 ದಿನಾಂಕ 15.03.2016 ರಂದು ದೂರುದಾರರಾದ ಶ್ರೀ ಬಸವರಾಜ ಗಾರಲದಿನ್ನಿ ರವರು 3 ಕಾಮಗಾರಿಗೆ ಸಂಬಂಧಿಸಿದಂತೆ ಅನುಧಾನವು ದುರ್ಭಳಕೆಯಾಗಿರುವುದಿಲ್ಲವೆಂದು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಮನವಿ ಪತ್ರದ ಜೆರಾಕ್ಸ್ ಪ್ರತಿಯಾಗಿರುತ್ತದೆ. ನಿ.ಡಿ–2 ಆ.ಸ.ನೌ–1 ರವರು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಆಕ್ಷೇಪಣೆಯ ಜೆರಾಕ್ಸ್ ಪ್ರತಿಯಾಗಿರುತ್ತದೆ. ನಿ.ಡಿ.–3 ಆ.ಸ.ನೌ–3 ರವರು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಆಕ್ಷೇಪಣೆಯ ಜೆರಾಕ್ಸ್ ಪ್ರತಿಯಾಗಿರುತ್ತದೆ. ನಿ.ಡಿ–4 ಅರಳಿಬೆಂಚಿ ಉರ್ದು ಪ್ರಾಥಮಿಕ ಶಾಲೆಯ ಕಾಮಗಾರಿಯ ಎಸ್ಟಿಮೇಟ್ ಜೆರಾಕ್ಸ್ ಪ್ರತಿಯಾಗಿರುತ್ತದೆ. ನಿ.ಡಿ.–5 ಜಾಲಿಬೆಂಚಿ ಗ್ರಾಮದಲ್ಲಿನ ಹಿರಿಯ ಪ್ರಾಥಮಿಕ ಶಾಲೆಯ ಕಾಮಗಾರಿಗೆ ಸಂಬಂದಿಸಿದ ಎಸ್ಟಿಮೇಟ್ ಜೆರಾಕ್ಸ್ ಪ್ರತಿಯಾಗಿರುತ್ತದೆ. ನಿ.ಡಿ–6 ಮೂಡಲದಿನ್ನಿ ಉರ್ದು ಶಾಲೆಯ ಕಾಮಗಾರಿಗೆ ಸಂಬಂಧಪಟ್ಟ ಎಸ್ಟಿಮೇಟ್ ಜೆರಾಕ್ಸ್ ಪ್ರತಿಯಾಗಿರುತ್ತದೆ.

17) ದೂರುದಾರರಾದ **ಶ್ರೀ ಬಸವರಾಜ ಗಾರಲದಿನ್ನಿ** ರವರು ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ **" ರಾಯಚೂರು ತಾಲ್ಲೂಕಿನ ಜಾಲಿಬೆಂಚಿ ಎಂಬಲ್ಲಿ ಎರಡು ಕನ್ನಡ ಶಾಲೆಗಳು ಇದ್ದು,**

ಮೂಡಲದಿನ್ನಿ, ಅರಳಿಚಂಚಿ, ಪತ್ತೆಪುರ, ಜಾಗೀರ ವೆಂಕಟಪುರ ಮತ್ತು ಅರಳಪ್ಪಹೂಡ ಎಂಬ ಗ್ರಾಮಗಳು ರಾಯಚೂರು ತಾಲ್ಲೂಕಿನಲ್ಲಿ ಇವೆ. ಆ ಶಾಲೆಗಳಲ್ಲಿ ಕುಡಿಯುವ ನೀರಿನ ಬಗ್ಗೆ ಕೇಂದ್ರ ಸರ್ಕಾರದಿಂದ ಅನುದಾನ ಬಂದಿತ್ತು. ಮೇಲ್ಕಂಡ ಗ್ರಾಮಗಳಾದ ಅರಳಿಬೆಂಚಿ, ಮೂಡಲದಿನ್ನಿ, ಪತ್ತೆಪುರ, ಜಾಗೀರ ವೆಂಕಟಾಪುರ ಮತ್ತು ಅರಳಪ್ಪನಹುಡ ಎಂಬಲ್ಲಿ ಉರ್ದು ಶಾಲೆಗಳು ಇರುವುದಿಲ್ಲ. ಅಲ್ಲಿ ಶಾಲೆಗಳು ಇವೆ ಎಂಬುದಾಗಿ ಹೇಳಿ ಕುಡಿಯುವ ನೀರು ಸರಬರಾಜಿನ ಬಗ್ಗೆ ಸಂಬಂಧಪಟ್ಟ ಅಭಿಯಂತರರು ಬಿಲ್‌ಗಳನ್ನು ಮಾಡಿರುತ್ತಾರೆ. ಜಾಲಿಬೆಂಚಿ ಎಂಬಲ್ಲಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು ಇವೆ ಎಂಬುದಾಗಿ ಬಿಲ್‌ಗಳನ್ನು ಮಾಡಲಾಗಿರುತ್ತದೆ ಆದರೆ ಅಲ್ಲಿ ಒಂದೇ ಶಾಲೆ ಇರುತ್ತದೆ".

ಈ ರೀತಿ ನುಡಿದಿದ್ದು, ತಾನು ಸಲ್ಲಿಸಿದ ನಿ.ಪಿ–3, 4 ಮತ್ತು 5 ದೂರಿನಲ್ಲಿನ ಸಂಗತಿಗೆ ಪೂರಕವಾಗುವಂತೆ ಸಾಕ್ಷ್ಯ ನುಡಿದಿರುತ್ತಾರೆ. ಈ ದೂರುದಾರರು ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸುವ ಪೂರ್ವದಲ್ಲಿ ರಾಯಚೂರು ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ದಿನಾಂಕ 09.06.2015 ಮತ್ತು 26.03.2015 ರಂದು ನಿ.ಪಿ–1 ಮತ್ತು 2 ರಂತೆ ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದೂರು ಸಲ್ಲಿಸಿದ್ದಾಗ್ಯೂ ಯಾವುದೇ ಕ್ರಮ ಜರುಗಿಸಿಲ್ಲವಾದ್ದರಿಂದ ನಿ.ಪಿ–3 ಮತ್ತು 4 ರಂತೆ ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವುದು ಕಂಡುಬರುತ್ತದೆ. ತನಿಖಾಧಿಕಾರಿಯಾದ ಪಿಡಬ್ಲ್ಯೂ–2 ತನಿಖೆ ಕೈಗೊಂಡಿದ್ದು, ತನಿಖಾ ಪೂರ್ವದಲ್ಲಿ ಈ ದೂರುದಾರರು ನಿ.ಪಿ–5 ರಂತೆ ಹೇಳಿಕೆ ನೀಡಿದ್ದು, ಈ ದೂರುದಾರರು ತನ್ನ ಹೇಳಿಕೆಯಲ್ಲಿ ನಿ.ಪಿ–3 ಮತ್ತು 4 ನ್ನು ಲೋಕಾಯುಕ್ತ ಸಂಸ್ಥೆಗೆ ತಾನು ಸಲ್ಲಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ತಾನು ನೀಡಿದ ದೂರು ಅರ್ಜಿಯಲ್ಲಿ, ರಾಯಚೂರು ತಾಲ್ಲೂಕಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು

ಸರಬರಾಜು ಯೋಜನೆ 2013-14ನೇ ಸಾಲಿನಲ್ಲಿ ಅರಳಪ್ಪನಹುಡ, ಪತ್ತೇಪುರ, ಜಾಗಿರವೆಂಕಟಾಪುರ, ಅರಳಿಬೆಂಚಿ ಮತ್ತು ಮೂಡಲದಿನ್ನಿ ಗ್ರಾಮಗಳಲ್ಲಿ ಉರ್ದು ಶಾಲೆ ಇಲ್ಲದಿದ್ದರೂ, ಆ ಶಾಲೆಗಳಿಗೆ ನೀರು ಸರಬರಾಜು ಮಾಡಿರುವುದಾಗಿ ಬಿಲ್ ಮಾಡಿರುತ್ತಾರೆಂದು ಆಪಾದಿಸಿರುವುದು ಕಂಡುಬರುತ್ತದೆ. ಅದೇ ಪ್ರಕಾರ ಜಾಲಿಬೆಂಚಿ ಗ್ರಾಮದಲ್ಲಿ ಸರ್ಕಾರಿ **ಹಿರಿಯ ಪ್ರಾಥಮಿಕ ಶಾಲೆಯೊಂದೆ ಇದ್ದರೂ ಸಹ, ಹಿರಿಯ ಪ್ರಾಥಮಿಕ ಶಾಲೆ ಮತ್ತು ಕಿರಿಯ ಪ್ರಾಥಮಿಕ ಶಾಲೆ** ಎಂದು ಎರಡು ಸಲ ಬಿಲ್ ತೆಗೆದಿರುವುದಾಗಿ ಆಪಾದಿಸಿರುತ್ತಾರೆ. ಅಲ್ಲದೆ, ಈ ಅವ್ಯವಹಾರವನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಕಿರಿಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ರವರು ಮಾಡಿರುತ್ತಾರೆಂದು ಸ್ಪಷ್ಟವಾಗಿ ಆಪಾದಿಸಿರುವುದು ಕಂಡುಬರುತ್ತದೆ.

18) ಈ ಆರೋಪಕ್ಕೆ ಸಂಬಂಧಿಸಿದಂತೆ ಈ ಲೋಕಾಯುಕ್ತ ಸಂಸ್ಥೆಯಿಂದ ತನಿಖಾಧಿಕಾರಿಯಾಗಿ ಪಿಡಬ್ಲ್ಯೂ-2/ವೀರಪ್ಪ ಕುಂಬಾರ, ಆರಕ್ಷಕ ಅಧೀಕ್ಷಕರು ನೇಮಕಗೊಂಡು ತನಿಖೆ ಮಾಡಿ ನಿ.ಪಿ-11 ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಪಿಡಬ್ಲ್ಯೂ-2 ರವರು ತನಿಖಾ ಕಾಲಕ್ಕೆ ಈ ದೂರಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ, ಕಾಮಗಾರಿ ಕಡತ ಮತ್ತು ದಾಖಲೆಗಳನ್ನು ಸಲ್ಲಿಸುವಂತೆ ನಿ.ಪಿ-6 ರಂತೆ ನೋಟಿಸ್ ನೀಡಿದ್ದಾಗಿ ಸದರಿ ನೋಟಿಸ್‌ಗೆ ಕಾರ್ಯಪಾಲಕ ಅಭಿಯಂತರರು ನಿ.ಪಿ-7 ರಂತೆ ಉತ್ತರಿಸಿದ್ದು, ತನ್ನ ಉತ್ತರದಲ್ಲಿ ಈ ಉಲ್ಲೇಖಿತ ದೂರಿನಲ್ಲಿ ಆಪಾದಿಸಲಾದ 7 ಕಾಮಗಾರಿಗಳು ತನ್ನ ಕಾರ್ಯಾವಧಿಯಲ್ಲಿ ಆಗಿರುವುದಿಲ್ಲವೆಂದು ಹೇಳಿರುತ್ತಾರೆ.

